ಹೊಸ ಪಿ.ಹೆಚ್.ಸಿ.ಗಳಿಗೆ ಅಗತ್ಯ ಸಿಬ್ಬಂದಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1139(1426)

ಸದಸ್ಯರ ಹೆಸರು: ಶ್ರೀ ಕೃಷ್ಣಮೂರ್ತಿ.ಕೆ.ಎಂ.(ಕಡೂರು)

ಉತ್ತರಿಸುವ ಸಚಿವರು: ಡಾ॥ ಎ.ಬಿ.ಮಾಲಕರೆಡ್ಡಿ(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಪ್ರಶ್ನೆ

ಅ) ಹೊಸದಾಗಿ ಮಂಜೂರಾಗಿರುವ ಪಿ.ಹೆಚ್.ಸಿ.ಗಳಲ್ಲಿ ಕಛೇರಿಯ ಸಿಬ್ಬಂದಿ ಹಾಗೂ ಅಗತ್ಯ ಆರೋಗ್ಯ ಸಿಬ್ಬಂದಿಯ ಹುದ್ದೆಗಳು ಮಂಜೂರಾಗಿರುವುದಿಲ್ಲ, ಹುದ್ದೆಗಳನ್ನು ಮಂಜೂರು ಮಾಡಲು ಸರ್ಕಾರ ಯಾವ ಕ್ರಮ ಕೈಗೊಳ್ಳುವುದು?

ಆ) ಜನಸಂಖ್ಯೆ ಎರಡು ಪಟ್ಟು ಹೆಚ್ಚಳವಾಗಿದ್ದರೂ ಗ್ರಾಮಾಂತರ ಪ್ರದೇಶದಲ್ಲಿ ವಾದಿಯರ ಸಂಖ್ಯೆಯನ್ನು ಹೆಚ್ಚು ಮಾಡಲು ಸರ್ಕಾರ ಕ್ರಮ ಕೈಗೊಂಡಿದೆಯೇ?

ಇ) ಉಪ ಕೇಂದ್ರಗಳನ್ನು ಹೊಸದಾಗಿ ತೆರೆಯಲು ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ?

ಉತ್ತರ

ಅ) ಅಗತ್ಯ ಆಯವ್ಯಯದೊಂದಿಗೆ ಇಂತಹ ಹುದ್ದೆಗಳನ್ನು ಮಂಜೂರು ಮಾಡಲು ಜಿಲ್ಲಾ ಪಂಚಾಯಿತಿಗಳಿಂದ ಪ್ರಸ್ತಾವನೆಗಳು ಬಂದಿರುವುದಿಲ್ಲ.

ಆ) ಇಲ್ಲ.

ಇ) ಭಾರತ ಸರ್ಕಾರವು 2001-2002ನೇ ಸಾಲಿನಲ್ಲಿ ಆರೋಗ್ಯ ಉಪ ಕೇಂದ್ರ ಸ್ಥಾಪಿಸಲು ''ಶೂನ್ಯಗುರಿ'' ನಿಗದಿಪಡಿಸಿರುವುದರಿಂದ ಹೊಸದಾಗಿ ಆರೋಗ್ಯ ಉಪ ಕೇಂದ್ರ ಸ್ಥಾಪಿಸುವ ಯೋಜನೆಯಿರುವುದಿಲ್ಲ.

ಕಲಾವಿದರಿಗೆ ಮಾಸಾಶನ ಹೆಚ್ಚಳ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1140(1121)

ಸದಸ್ಯರ ಹೆಸರು: ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ(ತುರುವೇಕೆರೆ)